# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ರಂಗಮ್ಮ, ಹಿಂದಿನ ಕಾರ್ಯದರ್ಶಿ, ಹುಲಿಹೈದರ್ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/110/ಇಎನ್‌ಕ್ಯೂ/2015, ದಿನಾಂಕ:21-12-2015.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅ.ಸ.ಪ.ಸಂಖ್ಯೆ: UPLOK-1/DE/06/2016/ARE-13, ದಿನಾಂಕ: 01-06-2019.
3. ಸರ್ಕಾರದ ಸಮ ಸಂಖ್ಯೆಯ ಎರಡನೇ ಕಾರಣ ಕೇಳುವ ನೋಟೀಸ್ ದಿನಾಂಕ:25-07-2019.
4. ಶ್ರೀಮತಿ ರಂಗಮ್ಮ, ಹಿಂದಿನ ಕಾರ್ಯದರ್ಶಿ, ಹುಲಿ ಹೈದರ್ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ, ದಿನಾಂಕ: 29-07-2019.

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀಮತಿ ರಂಗಮ್ಮ, ಹಿಂದಿನ ಕಾರ್ಯದರ್ಶಿ, ಹುಲಿಹೈದರ್ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ರಂತೆ ವಿಚಾರಣೆ ನಡೆಸಲು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿತ್ತು, ಅದರಂತೆ ವಿಚಾರಣಾಧಿಕಾರಿಗಳು(ಅಪರ ನಿಬಂಧಕರು, ವಿಚಾರಣೆಗಳು-13, ಕರ್ನಾಟಕ ಲೋಕಾಯುಕ್ತ) ಕೆಳಕಂಡಂತೆ ಆಪಾದನೆಗಳ ಕುರಿತು ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

" That, you DGO-1 Sri Nagod S.D Junior Enginner, panchayatha Raj Engineering Sub division, Gangavati in koppal District and you DGO-2 Smt Rangamma, the then Secreatary, Huli Hydar Gram panchayath, Gangvti taluk during the year 2008 09, have failed to follow the rules and regulation of Gremeena Ashraya Scheme while releasing the amount to the beneficiaries as to whether the houses are constructed up to stipulated stage as per regulation. You DGO-1 failed to ascertain that beneficiaries have constructed the house and you DGO-2 issued the cheques for a total amount of Rs. 5,75,000/- and Rs. 1,85,000/- in cash to 19 beneficiares by violating the rule. Thereby , you DGO-1 and 2 have failed to maintain absolute integrity and devotion to duty, the said act of you was un becoming of a Goverment servants and thereby committed misconduct as enumerated U/R 3(i) to (iii) of Karnataka civil service ( conduct) Rules 1966"

ವಿಚಾರಣಾಧಿಕಾರಿಯವರು, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ವರದಿಯಲ್ಲಿ ಸದರಿ ಆಪಾದಿತ ನೌಕರರ ಮೇಲಿನ ಆರೋಪವು ಸಾಬೀತಾಗಿರುವುದೆಂದು ನಿರ್ಣಯಿಸಿರುತ್ತಾರೆ. ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರುಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದಕೊಂಡು ದುರ್ನಡತೆ ಎಸಗಿರುವುದು ಕಂಡುಬರುವ ಹಿನ್ನಲೆಯಲ್ಲಿ ಈ ಆಪಾದಿತ ನೌಕರರುಗಳ ಮೇಲಿನ ಆಪಾದನೆಗಳ ಕುರಿತು ಮಾನ್ಯ ಲೋಕಾಯುಕ್ತರು ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತರೆ.

"It is hereby recommended to the Goverment for imposing penalty of reducing the pay in the time scale of pay by four lower stage, with cumulative effect and DGO-2 Smt Rangamma, the then secretary , hulihyder Grama panchayatha, Gangavathi taluk, koppal District."

ಈ ಸಂಬಂಧ ಆರೋಪಿತ ನೌಕರರಿಗೆ ನಿಯಮಾನುಸಾರ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟಿಸನ್ನು ಜಾರಿಗೊಳಿಸಲಾಗಿತ್ತು. ಸದರಿ ನೋಟೀಸಿಗೆ ಆಪಾದಿತ ನೌಕರರುಗಳು ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಶ್ರೀಮತಿ ರಂಗಮ್ಮ, ಹಿಂದಿನ ಕಾರ್ಯದರ್ಶಿ, ಹುಲಿ ಹೈದರ್ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ/ಸಮಜಾಯಿಷಿಗಳು ಕೆಳಕಂಡಂತೆ ಇರುತ್ತದೆ.

- ➤ ಗಂಗಾವತಿ ತಾಲ್ಲೂಕಿನ ಹುಲಿಹೈದರ್ ಗ್ರಾಮ ಪಂಚಾಯಿತಿಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ 04 ಜನ ಫಲಾನುಭವಿಗಳಿಗೆ ಚೆಕ್ ವಿತರಿಸುವ ಕುರಿತು- ತಾವು ಬ್ಯಾಂಕಿನಲ್ಲಿ ಹಣವಿಲ್ಲವೆಂದು ಗೊತ್ತಿದ್ದರೂ ಸಹ ಶ್ರೀಮತಿ ಹೇಮಾಕ್ಷಿ ಇವರಿಗೆ ರೂ.10.000/-ಗಳ ಶ್ರೀಮತಿ ಲಕ್ಷ್ಮವ್ವ ಇವರಿಗೆ ರೂ.10.000/-ಗಳ ಚೆಕ್‌ನ್ನು ಹಾಗೂ ರೂ.5.000/- ಚೆಕ್‌ನ್ನು ಹೀಗೆ ಒಟ್ಟು ರೂ.25.000/-ಗಳನ್ನು ಒತ್ತಡಕ್ಕೆ ಮಣಿದು ಕೊಟ್ಟಿರುವುದಾಗಿ ಆ ಚೆಕ್‌ಗಳು ಬ್ಯಾಂಕ್‌ನಲ್ಲಿ ಹಣವಿಲ್ಲವೆಂದು ಬೌನ್ಸ್ ಅಗಿರುತ್ತದೆ, ಈ ಬಗ್ಗೆ ಸಂಬಂಧಿಸಿದ ಪೋಲಿಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಬಹುದಾಗಿತ್ತು ಎಂದು ತಿಳಿಸಿರುತ್ತಾರೆ.
- ➤ ಸದರಿ ಪಂಚಾಯಿತಿಯಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಶ್ರೀಮತಿ ಹೇಮಾಕ್ಷಿ ರೂ.40.000/- ಶ್ರೀಮತಿ ಜಯಶ್ರೀ ರೂ.30.000/- ಶ್ರೀಮತಿ ಹನುಮಂತಿ ರೂ. 30.000/, ಮತ್ತು ಶ್ರೀಮತಿ ಹನುಮಕ್ಕ ರೂ.10.000/-, ಹೀಗೆ ಒಟ್ಟು 1.10.000/-ಗಳನ್ನು ಚೆಕ್ ಮುಖಾಂತರ ಕೊಡದೇ ಹಣದ ರೂಪದಲ್ಲಿ ಕೊಟ್ಟು ನಿಯಮ ಉಲ್ಲಂಘಿಸಿರುತ್ತಾರೆ ಎಂಬ ಈ ಎರಡು ತಪ್ಪಗಳಿಗೆ ಅಗಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿದ್ದ ದೌಲತ್ ಮಿಯಾ ಮತ್ತು ತಾಲ್ಲೂಕು ಪಂಚಾಯಿತಿ ಕಿರಿಯ ಅಭಿಯಂತರರು ಅಗಿದ್ದ ಎಸ್.ಡಿ ನಾಗೋಡ ಇವರಿಗೆ ಸಂಬಂಧಿಸಿರುತ್ತದೆ ಎಂದು ಡೆಪ್ಯೂಟಿ ಸುಪರಿಂಟೆಂಡೆಂಟ್ ಆಫ್ ಪೋಲಿಸ್, ಕರ್ನಾಟಕ ಲೋಕಾಯುಕ್ತ, ಕೊಪ್ಪಳ ಇವರು ನೀಡಿರುವ ಜೆರಾಕ್ಸ್ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸಲ್ಲಿಸಿರುವ ಲಿಖಿತ ಹೇಳಿಕೆ/ ಸಮಜಾಯಿಷಿಗಳನ್ನು ಹಾಗೂ ದೂರುದಾರರು ನೀಡಿರುವ ದೂರಿನಲ್ಲಿರುವ ಅಂಶಗಳನ್ನು, ಹಾಗೂ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯ ಮೇಲೆ ಮಾನ್ಯ ಉಪ ಲೋಕಾಯುಕ್ತರು ಮಾಡಿರುವ ಶಿಫಾರಸ್ಸನ್ನು ಪರಿಶೀಲಿಸಿದಾಗ ಕೆಳಕಂಡ ಅಂಶಗಳು ಅಂಶಗಳು ಕಂಡುಬರುತ್ತವೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ವಿವರವಾಧ ಕಾರಣಗಳನ್ನು ನೀಡಿರುತ್ತಾರೆ. ಪ್ರಮುಖವಾಗಿ ವರದಿಯಲ್ಲಿನ ಪ್ರಮುಖ ಅಂಶಗಳನ್ನು ಈ ಕೆಳಗಿನಂತೆ ಪುನರುಚ್ಚರಿಸಿದೆ:-

- 2008-09ನೇ ಸಾಲಿನಲ್ಲಿ ಹುಲಿ ಹೈದರ್ ಗ್ರಾಮ ಪಂಚಾಯಿತಿಗೆ ಗ್ರಾಮೀಣ ಆಶ್ರಯ ಮನೆ ಯೋಜನೆ ಅಡಿಯಲ್ಲಿ 55 ಫಲಾನುಭವಿಗಳಿಗೆ ಮನೆಗಳು ಮಂಜೂರಾಗಿತ್ತವೆ, ಆ ಪ್ರಕಾರ ಹುಲಿ ಹೈದರ್ ಗ್ರಾಮ ಪಂಚಾಯಿತಿಯವರು ಫಲಾನುಭವಿಗಳಿಗೆ ರೂ.40.000/-ಗಳನ್ನು ಮನೆ ಕಟ್ಟಿಸಿಕೊಳ್ಳಲು ಕೊಡಬೇಕು. ಒಂದು ವೇಳೆ ಫಲಾನುಭವಿಗಳಿಗೆ ಹಣ ಪಡೆದುಕೊಂಡು ಮನೆಯನ್ನು ಕಟ್ಟಿಸಿಕೊಳ್ಳಲು ಅಗದೇ ಇದ್ದವರೆಗೆ ತಾಲ್ಲೂಕು ಪಂಚಾಯಿತಿ ಕಿರಿಯ ಅಭಿಯಂತರರವರು ಸದರಿ ಹಣವನ್ನು ತಾವೇ ತೆಗೆದುಕೊಂಡು ಮನೆಯನ್ನು ಕಟ್ಟಿಸಿಕೊಡಬೇಕು ಅಂತ ನಿಯಮ ಇರುತ್ತದೆ. ಮನೆ ಕಟ್ಟಿಸಿಕೊಳ್ಳಲು ಫಲಾನುಭವಿಗಳಿಗೆ ರೂ.40.000/-ಗಳನ್ನು ಚೆಕ್ ಮುಖಾಂತರ ನಾಲ್ಕು ಹಂತದಲ್ಲಿ ಕೊಡಬೇಕು. 1ನೇ ಹಂತ ಫೌಂಡೇಶನ್, 2ನೇ ಹಂತ ವಿಂಡೋ ಲೇವಲ್, 3ನೇ ಹಂತ ಸ್ಲಾಬ್ ಮತ್ತು 4ನೇ ಹಂತ ಮನೆ ಕಟ್ಟುವುದು ಮುಗಿದು ನಂತರ ಸುಣ್ಣ ಬಣ್ಣವನ್ನು ಹಚ್ಚಿದ ನಂತರ ಈ ರೀತಿಯಾಗಿ ಹಂತ ಹಂತವಾಗಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಮತ್ತು ಫಲಾನುಭವಿಗಳು ಮನೆಯ ಮುಂದೆ ನಿಂತು ಪೋಟೋ ತೆಗೆಯಿಸಿಕೊಂಡು ನಂತರ ರೂ.10,000/-ಗಳನ್ನು ಚೆಕ್ ಮುಖಾಂತರ ನಾಲ್ಕು ಸಲ ಕೊಡಬೇಕಾಗಿತ್ತು.

- ಈ ರೀತಿಯಾಗಿ ಮೇಲೆ ನಮೂದಿಸಿದ ನಾಲ್ಕು ಫಲಾನುಭವಿಗಳಿಗೆ(ಶ್ರೀಮತಿ ಹೇಮಾಕ್ಷಿ, ಶ್ರೀಮತಿ ಜಯಶ್ರೀ, ಶ್ರೀಮತಿ ಜಯಶ್ರೀ, ಶ್ರೀಮತಿ ಹನುಮಂತಿ) ಮನೆ ಕಟ್ಟಿಸಿಕೊಳ್ಳಲು ಪ್ರತಿಯೊಬ್ಬರಿಗೂ ರೂ.40.000/- ಹಣವನ್ನು ಹುಲಿ ಹೈದರ್ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯವರು ಚೆಕ್ ಮುಖಾಂತರ ಕೊಡಬೇಕಾಗಿತ್ತು. ಆದರೆ ಚೆಕ್ ಮುಖಾಂತರ ಕೇವಲ ಎರಡು ಜನ ಫಲಾನುಭವಿಗಳಿಗೆ ಅಂದರೆ 2ನೇ ಆಪಾದಿತ ನೌಕರರು ಶ್ರೀಮತಿ ಜಯಶ್ರೀ ರವರಿಗೆ ರೂ.10.000/- ಹಣವನ್ನು ಶ್ರೀಮತಿ ಹನುಮಮ್ಮ ಇವರಿಗೆ ರೂ.30.000.-ಗಳು ಒಟ್ಟು ರೂ.40.000/-ಗಳನ್ನು ಚೆಕ್ ಮುಖಾಂತರ ನೀಡಿದ್ದು, ನಗದು ರೂಪದಲ್ಲಿ ಕಾರ್ಯದರ್ಶಿ ದೌಲತ್ ಮಿಯಾ ರವರು 3ನೇ ಆಪಾದಿತ ನೌಕರರಿಗೆ ರೂ. 10.000/-ಗಳನ್ನು ನಗದು ರೂಪದಲ್ಲಿ ಕೊಟ್ಟಿರುತ್ತಾರೆ. ಈ ನಾಲ್ಕು ಜನ ಫಲಾನುಭವಿಗಳಿಗೆ ರೂ.1,10,000/- ಗಳನ್ನು ಇನ್ನೂವರೆಗೆ ಹುಲಿ ಹೈದರ್ ಗ್ರಾಮ ಪಂಚಾಯಿತಿಯವರು ಬಾಕಿ ಹಣ ಕೊಟ್ಟಿರುವುದಿಲ್ಲ. ಮೇಲ್ಕಾಣಿಸಿದ ನಾಲ್ಕು ಜನ ಫಲಾನುಭವಿಗಳಿಗೆ ಪೈಕಿ 1 ರಿಂದ 3 ರವರು ಮನೆಯನ್ನು ಕಟ್ಟಿಸಿಕೊಂಡಿರುವುದಿಲ್ಲ. ಜಯಶ್ರೀ ರವರು ಪಾಯ(ಫೌಂಡೇಶನ್) ಮಾತ್ರ ಹಾಕಿಕೊಂಡಿರುತ್ತಾರೆ. ಅ.ನಂ.01 ಶ್ರೀಮತಿ ಹೇಮಾಕ್ಷಿ ಇವರಿಗೆ ಕೊಟ್ಟ ಚೆಕ್ ನಂ.700457 ರೂ.10.000/- ಚೆಕ್ ಔನ್ಸ್ ಅಗಿದ್ದು, ನಗದು ರೂಪದಲ್ಲಾಗಲಿ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ. ಕಾರಣ ಸದರಿಯವರು ಮನೆಯನ್ನು ಕಟ್ಟಿಸಿಕೊಂಡಿರುವುದಿಲ್ಲವಾದ್ದರಿಂದ ಇವರ ಪೋಟೊ ತೆಗೆದುಕೊಂಡಿರುವುದಿಲ್ಲವೆಂದು ವಿಚಾರಣ ವರದಿಗಳಿಂದ ತಿಳಿದು ಬರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ದೂರುದಾರರು ಸಲ್ಲಿಸಿರುವ ದೂರಿನಲ್ಲಿನ ಅಂಶಗಳು, ವಿಚಾರಣಾಧಿಕಾರಿಯವರು ಸಲ್ಲಿಸಿರುವ ವರದಿ ಹಾಗೂ ಆಪಾದಿತ ನೌಕರರು ಸಲ್ಲಿಸಿದ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿದಾಗ ಸದರಿಯವರ ಮೇಲಿನ ಆಪಾದನೆಗಳನ್ನು ಕೈಬಿಡಲು ಸೂಕ್ತ/ ಸಮಂಜಸ/ಸಮಾಧಾನಕರ ಕಾರಣಗಳು ಕಂಡುಬರುತ್ತಿಲ್ಲವಾದ್ದರಿಂದ ಸದರಿ ಆಪಾದಿತ ನೌಕರರುಗಳ ವಿರುದ್ಧದ ವಿಚಾರಣಾ ಪ್ರಕರಣದಲ್ಲಿನ ವಿಚಾರಣಾಧಿಕಾರಿಗಳ ವರದಿ, ತತ್ಸಂಬಂಧಿತ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ ಶ್ರೀಮತಿ ರಂಗಮ್ಮ, ಹಿಂದಿನ ಕಾರ್ಯದರ್ಶಿ, ಹುಲಿಹೈದರ್ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರಿಗೆ **ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 8(ivಎ) ರಡಿಯಲ್ಲಿ ನಿರ್ದಿಷ್ಟ ಪಡಿಸಿದಂತೆ ಸದರಿಯವರಿಗೆ ನಾಲ್ಕು ಕಾಲಿಕವೇತನ ಶ್ರೇಣಿಯನ್ನು ಸಂಚಿತ ಪರಿಣಾಮದೊಂದಿಗೆ ಕೆಳಗಿನ ಹಂತಕ್ಕೆ ಇಳಿಸುವ ದಂಡನೆಯನ್ನು ವಿಧಿಸಲು** ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/326/ಗ್ರಾಪಂಕಾ/2019,**
**ಬೆಂಗಳೂರು, ದಿನಾಂಕ:17-01-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀಮತಿ ರಂಗಮ್ಮ, ಹಿಂದಿನ ಕಾರ್ಯದರ್ಶಿ, ಹುಲಿಹೈದರ್ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 8(ivಎ) ರಡಿಯಲ್ಲಿ ನಿರ್ದಿಷ್ಟ ಪಡಿಸಿದಂತೆ **ಸದರಿಯವರಿಗೆ ನಾಲ್ಕು ಕಾಲಿಕವೇತನ ಶ್ರೇಣಿಯನ್ನು ಸಂಚಿತ ಪರಿಣಾಮದೊಂದಿಗೆ ಕೆಳಗಿನ ಹಂತಕ್ಕೆ ಇಳಿಸುವ ದಂಡನೆಯನ್ನು** ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 17/01/2020.
(ಬಿ.ನವೀನ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-2, ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ ಜಿಲ್ಲೆ.
6) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಗಂಗಾವತಿ,ಕೊಪ್ಪಳ ಜಿಲ್ಲೆ.
7) ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
8) ಶ್ರೀ ರಂಗಮ್ಮ, ಹಿಂದಿನ ಕಾರ್ಯದರ್ಶಿ, ಹುಲಿಹೈದರ್ ಗ್ರಾಮ ಪಂಚಾಯಿತಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ
9) ಗಣಕ ಕೋಶ.
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.